1	2	3
5.	Mundgod	44
6.	Kumta	45
7.	Honnavar	50
8.	Bhatkal	45
9.	Yellapur	25
10.	Haliyal	40
11.	Karwar	45
		444
	Grand Total	**11888**

ವಿಶ್ವಯೋಜನೆ (ನೀರಿನ) ಯೋಜನೆ ಅಡಿಯಲ್ಲಿ ಕಳಪೆ ಮಟ್ಟದ ಕಾಮಗಾರಿ

3279 - ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವಯೋಜನೆ ಅಡಿಯಲ್ಲಿ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಕಳಪೆ ಮಟ್ಟದ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ ಈ ಬಗ್ಗೆ ಜರುಗಿಸಿದ ಕ್ರಮಗಳೇನು?*

ಇ) *ಈ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಯಾವುದು ಇಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಆರಕ್ಷಕ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯ

3281 - ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಆರಕ್ಷಕ ಸಿಬ್ಬಂದಿಗೆ ಸೂಕ್ತ ಪ್ರಮಾಣದಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸಿ ಕೊಡಲಾಗಿದೆಯೆ?

2. ಕೊರತೆ ಇರುವ ಹೊಸ ವಸತಿ ಗೃಹಗಳನ್ನು ಕಟ್ಟಿಸಿ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ? ಕೊರತೆ ಇದ್ದಲ್ಲಿ ಯಾವಾಗ ಕ್ರಮ ಜರುಗಿಸಲಾಗುವುದು?

3. ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಅಗ್ನಿಶಾಮಕ ದಳದ ಕಛೇರಿಗೆ ಸ್ವಂತ ಕಟ್ಟಡವನ್ನು ಯಾವಾಗ ಕಟ್ಟಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1. ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಬೆಳ್ತಂಗಡಿ ಠಾಣೆಯ 1 ಪಿಎಸ್‌ಐ, 2 ಎಎಸ್‌ಐ, 1 ಹೆಚ್‌ಸಿ, 12 ಪಿಸಿ ಸಿಬ್ಬಂದಿಗಳಿಗೆ ಹಾಗೂ ವೇಣೂರು ಠಾಣೆಯ 2 ಹೆಚ್‌ಸಿ, 9 ಪಿಸಿ ಸಿಬ್ಬಂದಿಯವರಿಗೆ ವಸತಿ ಗೃಹಗಳನ್ನು ಕಲ್ಪಿಸಿಕೊಡಲಾಗಿದೆ.

2. ವಸತಿ ಗೃಹದ ಕೊರತೆಯಿರುವ ಬೆಳ್ತಂಗಡಿ ಠಾಣೆಯ 1 ಪಿ.ಐ., 8 ಹೆಚ್.ಸಿ, 19 ಪಿಸಿ ಗಳಿಗೆ ಹಾಗೂ ವೇಣೂರು ಠಾಣೆಯ 1 ಪಿಎಸ್‌ಐ, 2 ಎಎಸ್‌ಐ, 5 ಹೆಚ್‌ಸಿ ಹಾಗೂ 12 ಪಿಸಿ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಕಲ್ಪಿಸಿಕೊಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

3. ಅಗ್ನಿಶಾಮಕ ಠಾಣೆಯ ಕಟ್ಟಡವನ್ನು ನಿರ್ಮಾಣ ಮಾಡಲು ಅಗತ್ಯವಾದ ಹಣಕಾಸು ಲಭ್ಯವಾದ ನಂತರ, ಈ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಬಿಜಾಪುರ ತಾಲ್ಲೂಕು ಅಂಕಲಗಿ ಇಂಗು ಕೆರೆ ಯೋಜನೆ

3282 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಅಂಕಲಗಿ ಇಂಗು ಕೆರೆ ಯೋಜನೆಗೆ ಎಂದು ಮಂಜೂರಾತಿ ನೀಡಲಾಗಿದೆ?

ಆ) ಈ ಕಾಮಗಾರಿಗೆ ಮಂಜೂರಾದ ಒಟ್ಟು ಹಣ ಎಷ್ಟು?

ಇ) ಈ ಯೋಜನೆ ಈಗ ಯಾವ ಹಂತದಲ್ಲಿದೆ?

ಈ) ಈ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಲಿಕ್ಕೆ ಇನ್ನೂ ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಜನವರಿ 1999ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಆ) ರೂ. 29.60 ಲಕ್ಷ.

ಇ) ಈ ಯೋಜನೆಯ ಕಾಮಗಾರಿ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲಾಗಿದ್ದು,